**ಸಾಕ್ಷಿಯನ್ನು ದಿಃ _09/12/2025_ ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜಿಎಸಎಸ ವಕೀಲರಿಂದ ವಾದಿ ಪರವಾಗಿ. .***

ನನ್ನ ಜನ್ಮ ದಿನಾಂಕ 06-06-1982. ನಾನು ಎಂಸಿಎ ಪದವಿಧರ. ನಾನು ಅಳ್ನಾವರದ ಖಾಯಂ ನಿವಾಸಿ. ನಾನು ಮತ್ತು ಪ್ರತಿವಾದಿಯರು ಒಂದೇ ಮನೆಯಲ್ಲಿ ವಾಸವಿರುತ್ತೇವೆ. ಪ್ರತಿವಾದಿ ನಂ.3 ಸುಶೀಲಾ ನನ್ನ ತಾಯಿ. ನನಗೆ ಪ್ರತಿವಾದಿ ನಂ.1, 3 ಮತ್ತು 4 ತಮ್ಮ ಪರವಾಗಿ ಸಾಕ್ಷಿ ನುಡಿಯಲು ಮೊಕ್ತಿಯಾರ ಪತ್ರ ನೀಡಿರುತ್ತಾರೆ. ಪ್ರತಿವಾದಿ ನಂ.5 ಇವರು ನನಗೆ ಸಾಕ್ಷ ನುಡಿಯಲು ಅಧಿಕಾರವನ್ನು ಕೊಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವರು ಬೇರೆ ಊರಿನಲ್ಲಿರುವ ಕಾರಣ ನೀಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನಂ.6 ಇವರು ಸಹ ಅವರ ಪರವಾಗಿ ಸಾಕ್ಷ ನುಡಿಯಲು ಅಧಿಕಾರ ಕೊಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವರು ಸಹ ಮದುವೆಯಾಗಿ ಬೇರೆ ಕಡೆಗೆ ವಾಸ ಮಾಡುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ ನಾನು ಪ್ರತಿವಾದಿ ನಂ.1, 3 ಮತ್ತು 4ರ ಪರವಾಗಿ ಸಾಕ್ಷ ನುಡಿಯಲು ಅಧಿಕಾರ ಹೊಂದಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಪ್ರತಿವಾದಿ ನಂ.1 ರಿಂದ 6ರ ಪರವಾಗಿ ಸಾಕ್ಷ ನುಡಿಯುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ಸಾಕ್ಷ ಪ್ರಮಾಣಪತ್ರದಲ್ಲಿ ಈ ರೀತಿ ಮಿಕ್ಕಿದವರ ಪರವಾಗಿ ಸಹ ಸಾಕ್ಷ ನುಡಿಯಲು ಅಧಿಕಾರ ಹೊಂದಿರುತ್ತೇನೆ ಎಂದು ಬರೆದಿಲ್ಲ ಎಂದರೆ ನಿಜ.

1ನೇ ಪ್ರತಿವಾದಿ ಈಶ್ವರ ಇವರು ಸಾಕಷ್ಟು ಬಾರಿ ಈ ದಾವೆಯಲ್ಲಿ ಹಾಜರಾಗಿದ್ದಾರೆ ಎಂದರೆ ನಿಜ. ಪ್ರತಿವಾದ ಪತ್ರವನ್ನು ಅವರೇ ಸಹಿ ಮಾಡಿ ಸಲ್ಲಿಸಿರುತ್ತಾರೆ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿ ನಡುವೆ ಆಗಿರುವ ಎಲ್ಲ ದಾವೆ ಮತ್ತು ಪ್ರಕರಣಗಳಲ್ಲಿ ಸದರಿ ಪ್ರತಿವಾದಿ ನಂ.1 ಇವರೇ ಭಾಗವಹಿಸಿ ತಮ್ಮ ಅರ್ಜಿ ಮತ್ತು ತಕರಾರು ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿಯವರೇ ತಮ್ಮ ನುಡಿ ಸಾಕ್ಷವನ್ನು ಸಹ ಅವುಗಳಲ್ಲಿ ನುಡಿದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿಯವರು ಆ ಸಮಯದಲ್ಲಿ ಸ್ವಸ್ತ ಇರುವ ಕಾರಣ ಅವರೇ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನಂ.1 ಇವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತೋರಿಸಲು ಪಾಟೀಲ ವೈದ್ಯರು ನೀಡಿರುವ ಪ್ರಮಾಣಪತ್ರ ಹಾಜರುಪಡಿಸಿರುತ್ತೇನೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಇವತ್ತಿಗೂ ಸಾಕ್ಷ ನುಡಿಯುವ ಸ್ಥಿತಿಯಲ್ಲಿರುತ್ತಾರೆ, ಆದ್ದರಿಂದ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿ ನಂ.3 ಮತ್ತು 4 ಆರಾಮವಾಗಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಾಯಿ ಮನೆಯಲ್ಲಿರುತ್ತಾರೆ, ನನ್ನ ಚಿಕ್ಕಮ್ಮ ಬೇರೆ ಕಡೆ ನೌಕರಿ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಮೊಕ್ತಿಯಾರ ಪತ್ರದಲ್ಲಿ ನನ್ನ ಚಿಕ್ಕಮ್ಮ ಬೇರೆ ಕಡೆಗೆ ನೌಕರಿ ಮಾಡುತ್ತಿದ್ದಾರೆ ಎಂದು ನಾನು ಬರೆಸಿರಬಹುದು. ಈ ರೀತಿ ಇರುವಾಗ ಸದರಿ ದಾವೆಯ ಕುರಿತು ಸಂಪೂರ್ಣ ಮಾಹಿತಿ ಪ್ರತಿವಾದಿ ನಂ.1, 3 ಮತ್ತು 4 ಇವರಿಗೆ ಇರುತ್ತದೆ ವಿನಃ ನನಗೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೂ ಸಹ ಮಾಹಿತಿ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ.

ದಾವಾದಾಸ್ತಿಗಳು ಎಂದರೆ ಮೂರು ಜಮೀನುಗಳು ಮತ್ತು ಮೂರು ಮನೆಗಳು ಇರುತ್ತವೆ. ಈ ರೀತಿ ಜಮೀನುಗಳು ಎಂದರೆ ಅಳ್ನಾವರದ ಆರ್.ಎಸ್.ನಂ. 74/1 ಕ್ಷೇತ್ರ 5 ಎಕರೆ 26 ಗುಂಟೆ, ಆರ್.ಎಸ್.ನಂ. 74/2 ಕ್ಷೇತ್ರ 5 ಎಕರೆ 25 ಗುಂಟೆ ಮತ್ತು ಕಡಬಗಟ್ಟಿ ಗ್ರಾಮದ ಆರ್.ಎಸ್.ನಂ. 112/2 ಕ್ಷೇತ್ರ 4 ಎಕರೆ 22 ಗುಂಟೆ ಇರುತ್ತದೆ. ಅದರಂತೆ ಮನೆಗಳು ಎಂದರೆ ಅಳ್ನಾವರ ಜುಮ್ಮಾ ಮಸೀದಿ ಹತ್ತಿರ ಇರುವ ಪಟ್ಟಣ ಪಂಚಾಯತ ನಂ.1902 ಇದ್ದು, ಕ್ಷೇತ್ರ 2112 ಚ.ಅಡಿ, ಅದರಂತೆ ಜುಮ್ಮಾ ಮಸೀದಿ ಹತ್ತಿರ ಇರುವ ಮಹಾವೀರ ರಸ್ತೆಯ ಪಟ್ಟಣ ಪಂಚಾಯತ ನಂ.1923/ಎ ಇದ್ದು, ಕ್ಷೇತ್ರ 599 ಚ.ಅಡಿ ಮತ್ತು ಜುಮ್ಮಾ ಮಸೀದಿ ರಸ್ತೆಯ ಪಟ್ಟಣ ಪಂಚಾಯತ ನಂ.1903 ಇದ್ದು, ಕ್ಷೇತ್ರ ಅತಿಕ್ರಮಣ ಮಾಡಿರುವ ಕಾರಣ ಪ್ರಸ್ತುತ ಖಚಿತವಾಗಿ ಎಷ್ಟು ಇದೆ ಎಂದು ಹೇಳಲು ಬರುವುದಿಲ್ಲ. ದಾವಾದಾಸ್ತಿಯಾದ ಇನ್ನೊಂದು ಮನೆ ಮಹಾವೀರ ರಸ್ತೆಯ ಪಟ್ಟಣ ಪಂಚಾಯತ ನಂ.1922 ಇದ್ದು, ಕ್ಷೇತ್ರ ಹೇಳಲು ಬರುವುದಿಲ್ಲ.

ಮನೆ ನಂ.1902 ಮತ್ತು 1903 ಇವು ನಮ್ಮ ಮನೆತನದ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. 1923/ಎ ಮನೆ ನನ್ನ ಅಜ್ಜ ವೀರಪ್ಪ ಬಸಪ್ಪ ಜಕಾತಿ ಇವರು ಖರೀದಿ ಮಾಡಿದ ಆಸ್ತಿ ಇರುತ್ತದೆ. ಅದರಂತೆ 1922 ವಾದಿಯರ ಹೆಸರಿನಲ್ಲಿದ್ದು ಅದು ಹೇಗೆ ಯಾವ ಮೂಲದಿಂದ ಅವರಿಗೆ ಬಂದಿದೆ ಎಂದು ನನಗೆ ಹೇಳಲು ಬರುವುದಿಲ್ಲ.

ಮನೆ ನಂ.1922 ರ ಚಕ್ಕುಬಂದಿ ಪೂರ್ವಕ್ಕೆ ಪಾವುಸ್ಕರ ಇವರ ಮನೆ ವ ಖುಲ್ಲಾ ಜಾಗೆ, ಪಶ್ಚಿಮಕ್ಕೆ 1923/ಎ ಪ್ರತಿವಾದಿಯರಿಗೆ ಸಂಬಂಧಿಸಿದ ಜಾಗೆ, ಉತ್ತರಕ್ಕೆ ಮೂಲ ಮಾಲೀಕರಾದ ನರಸಿಂಗಪ್ಪ ಪೀರೋಜಿ (ಪ್ರತಿವಾದಿ ನಂ.7 ರಿಂದ 12) ಇವರ ಮಿಕ್ಕಿದ ಜಾಗೆ ಮತ್ತು ದಕ್ಷಿಣಕ್ಕೆ ಬಾಬುಲಾಲ ಅವರಾದಿ ಇವರ ಮನೆ ಇರುತ್ತದೆ.

ನಮ್ಮ ಮನೆತನದ ಮೂಲಪುರುಷ ಎಂದರೆ ಬಸಪ್ಪ. ಬಸಪ್ಪನಿಗೆ ಚಂದ್ರಪ್ಪ ಎನ್ನುವ ಅಣ್ಣನಿದ್ದ. ಬಸಪ್ಪನಿಗೆ ವೀರಪ್ಪ ಮತ್ತು ಬಸವಣ್ಣೆಪ್ಪ ಎಂಬ ಇಬ್ಬರೂ ಮಕ್ಕಳು. ಚಂದ್ರಪ್ಪನಿಗೆ ಸಂಗಪ್ಪ ಎನ್ನುವ ಒಬ್ಬ ಮಗನಿದ್ದ. ವಾದಿಯರು ಮೂರು ಜನ ಬಸವಣ್ಣೆಪ್ಪ ವಾರಸುದಾರರು ಎಂದರೆ ನಿಜ. ಪ್ರತಿವಾದಿ ನಂ.1 ರಿಂದ 6 ಇವರು ವೀರಪ್ಪನ ವಾರಸುದಾರರು ಎಂದರೆ ನಿಜ. ಪ್ರತಿವಾದಿ ನಂ.7 ರಿಂದ 12 ನರಸಿಂಗಪ್ಪ ಪೀರೋಜಿ ಇವರ ವಾರಸುದಾರರು ಎಂದರೆ ನಿಜ. ನರಸಿಂಗಪ್ಪ ಪೀರೋಜಿ ಮತ್ತು ನಮ್ಮ ನಡುವೆ ಯಾವುದೇ ವಾಟ್ನಿಯಾಗಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿಯವರು ನಮ್ಮ ಮನೆತನಕ್ಕೆ ಮತ್ತು ಮನೆತನದ ಆಸ್ತಿಗಳಿಗೆ ಸಂಬಂಧವಿಲ್ಲ ಎಂದು ಉತ್ತರಿಸುತ್ತಾರೆ. ಪಟ್ಟಣ ಪಂಚಾಯತಿ ನಂ.1922 ರಲ್ಲಿ ಯಾವುದೇ ವಿಭಾಗವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆ ವಾದಿಯರ ಹೆಸರಿನಲ್ಲಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವರ ತಂದೆಯಾದ ಬಸವಣ್ಣೆಪ್ಪ ಇವರ ಹೆಸರಿನಲ್ಲಿ ಖರೀದಿ ಪತ್ರ ಇರುತ್ತದೆ ಎಂದು ಉತ್ತರಿಸುತ್ತಾರೆ. ಪಂಚಾಯತಿ ದಾಖಲೆಗಳಲ್ಲಿ ಇನ್ನೂ ನರಸಿಂಗಪ್ಪ ಪೀರೋಜಿ ಇವರ ಹೆಸರಿನಲ್ಲಿರುತ್ತದೆ.

ಬಸಪ್ಪ ಮತ್ತು ಚಂದ್ರಪ್ಪನ ನಡುವೆ ವಾಟ್ನಿಯಾಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಬಸಪ್ಪನ ಮಕ್ಕಳ ಮತ್ತು ಚಂದ್ರಪ್ಪ ನಡುವೆ ವಾಟ್ನಿಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಈ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ವಾಟ್ನಿ ಪತ್ರ ಕೊಟ್ಟಿದೇನೆ ಇಲ್ಲವೊ ನನಗೆ ಗೊತ್ತಿಲ್ಲ, ಆದರೆ ಆ ಕುರಿತು ಸಂಬಂಧಿತ ಮುನ್ಸಿಪಾಲಿಟಿ ದಾಖಲೆ ಹಾಜರುಪಡಿಸಿದ್ದೇನೆ. ಸದರಿ ವಾಟ್ನಿಯಲ್ಲಿ ಚಂದ್ರಪ್ಪನಿಗೆ ಜಮೀನು ಬಂದಿರುತ್ತದೆ. ಸದರಿ ಜಮೀನುಗಳು ಚಂದ್ರಪ್ಪ ಖರೀದಿ ಮಾಡಿದ್ದು ಇರುತ್ತದೆ. ಚಂದ್ರಪ್ಪನಿಗೆ ಬಂದಿರುವ ಮನೆಗಳ ಕುರಿತು ನನಗೆ ಮಾಹಿತಿ ಇಲ್ಲ. ಪ್ರಸ್ತುತ ದಾವಾದಾಸ್ತಿಗಳಿಗೆ ಮತ್ತು ಚಂದ್ರಪ್ಪನಿಗೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಬಸಪ್ಪ ತೀರಿಹೋದ ಇಸ್ವಿ ನನಗೆ ಹೇಳಲು ಬರುವುದಿಲ್ಲ, ತೀರಿಹೋಗಿ 50-60 ವರ್ಷವಾಗಿರಬಹುದು. ಸದರಿ ಬಸಪ್ಪನ ಎರಡನೇ ಮಗ ಬಸವಣ್ಣೆಪ್ಪ 2001 ನೇ ಇಸ್ವಿಯಲ್ಲಿ ಮತ್ತು ಮೊದಲನೇ ಮಗ ವೀರಪ್ಪ 2006 ನೇ ಇಸ್ವಿಯಲ್ಲಿ ತೀರಿಹೋಗಿದ್ದಾರೆ.

ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 6 ಇವರು ಏಕತ್ರ ಘರಾಣೇಯ ಸದಸ್ಯರು ಎಂದರೆ ಸರಿಯಲ್ಲ. ದಾವಾ ಜಮೀನುಗಳು ಹಿರಿಯರಿಂದ ಬಂದ ಆಸ್ತಿಗಳು ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೂರು ಜಮೀನುಗಳು ಚಂದ್ರಪ್ಪ ಅಜ್ಜನಿಂದ ಬಂದ ಆಸ್ತಿಗಳು, ಕಾರಣ ಬಸಪ್ಪ ತಮ್ಮ ಚಿಕ್ಕ ವಯಸ್ಸಿನಲ್ಲಿ ತೀರಿಹೋದ ಕಾರಣ ಎಲ್ಲ ದಾವಾದಾಸ್ತಿಗಳು ಚಂದ್ರಪ್ಪನ ಹೆಸರಿನಲ್ಲಿದ್ದವು, ಅದ್ದರಿಂದ ಸದರಿಯವರಿಂದ ಸದರಿ ಆಸ್ತಿಗಳು ಬಂದಿರುತ್ತವೆ ಎಂದು ಉತ್ತರಿಸುತ್ತಾರೆ.

ಇವತ್ತಿಗೂ ಸಹ ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 6 ದಾವಾ ಜಮೀನುಗಳ ಸಾಮೂಹಿಕ ಕಬ್ಜೆಯಲ್ಲಿರುತ್ತಾರೆ ಎಂದರೆ ಸುಳ್ಳು.

ದಾವಾ ಜಮೀನುಗಳು ವಾದಿ ಮತ್ತು ಪ್ರತಿವಾದಿ ನಂ.1 ರಿಂದ 6 ಇವರ ನಡುವೆ 1962 ರಲ್ಲಿ ವಾಟ್ನಿಯಾಗಿರುತ್ತದೆ. ವಾಟ್ನಿಯಾದ ಖಚಿತ ದಿನಾಂಕ ಮತ್ತು ತಿಂಗಳು ನನಗೆ ಹೇಳಲು ಬರುವುದಿಲ್ಲ. ಈ ಕುರಿತು ದಾಖಲೆಗಳು ಸಲ್ಲಿಸಿರುತ್ತೇವೆ, ಯಾವ ದಾಖಲೆಗಳು ಎಂದು ನನಗೆ ಹೇಳಲು ಬರುವುದಿಲ್ಲ. 1962 ನೇ ಇಸ್ವಿಯಲ್ಲಿ ಚಂದ್ರಪ್ಪ ಮತ್ತು ಬಸಪ್ಪನ ಮಕ್ಕಳಾದ ವೀರಪ್ಪ ಮತ್ತು ಬಸವಣ್ಣೆಪ್ಪ ಇವರ ನಡುವೆ ವಾಟ್ನಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ಸಂಗತಿ ನನ್ನ ಪ್ರತಿವಾದ ಪತ್ರದಲ್ಲಿ ಸಾಕ್ಷ ಪ್ರಮಾಣಪತ್ರದಲ್ಲಿ ಬರೆದಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯರ ಮತ್ತು ಪ್ರತಿವಾದಿ ನಂ.1 ರಿಂದ 6 ಇವರ ನಡುವೆ ವಾಟ್ನಿಯಾಗಿಲ್ಲ ಎಂದರೆ ಸರಿಯಲ್ಲ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.3 ರಂತೆ ಇರುವ ಆರ್.ಎಸ್.ನಂ. 112 ಹಿಸ್ಸಾ ಪಿ ಇದರ 2021-22 ರ ಪಹಣಿ ಪತ್ರಿಕೆ ಸಾಕ್ಷಿದಾರರಿಗೆ ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯಲ್ಲಿ ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 6

ಇವರ ಎಲ್ಲರ ಹೆಸರು ನಮೂದು ಇರುತ್ತದೆ ಎಂದು ಸೂಚಿಸಲಾಗಿ, ಸಾಕ್ಷಿದಾರರು ಅದನ್ನು ನೋಡಿ ಪಹಣಿ ಪತ್ರಿಕೆಯಲ್ಲಿ ಎಲ್ಲರ ಹೆಸರು ನಮೂದು ಇರುತ್ತದೆ, ಆದರೆ ವಾಟ್ನಿಯಾಗಿರುತ್ತದೆ, ಪಹಣಿ ಪತ್ರಿಕೆಯಲ್ಲಿ ವಿಭಜನೆಯಾಗಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ ಸದರಿ ಜಮೀನನ್ನು ನಾವುಗಳು ಎಲ್ಲರೂ ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವುಗಳು ದಕ್ಷಿಣ ಭಾಗದ 2 ಎಕರೆ 11 ಗುಂಟೆ ಕ್ಷೇತ್ರ ಸಾಗುವಳಿ ಮಾಡುತ್ತಿದ್ದೇವೆ. ಸದರಿ ವಿಷಯ ಸಂಗತಿ ನಮ್ಮ ಪ್ರತಿವಾದ ಪತ್ರದಲ್ಲಿ ಸಾಕ್ಷ ಪ್ರಮಾಣಪತ್ರದಲ್ಲಿ ಬರೆಸಿದ್ದೇವೆ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಟ್ಟಣ ಪಂಚಾಯತ ನಂ.1902 ಮನೆ ಪ್ರತಿವಾದಿ ನಂ.1 ಈಶ್ವರ ಜಕಾತಿ ಇವರ ಹೆಸರಿನಲ್ಲಿರುತ್ತದೆ. ಅದರಂತೆ ಪಟ್ಟಣ ಪಂಚಾಯತ ನಂ.1903 ಮನೆ ವಾದಿ ನಂ.1 ಮತ್ತು 2 ಇವರ ಹೆಸರಿನಲ್ಲಿರುತ್ತದೆ. ಇನ್ನೇರಡು ದಾವಾ ಮನೆಗಳು ಅಂದರೆ ಮನೆ ನಂ.1922 ಇದ್ದು ನರಸಿಂಗಪ್ಪ ಪೀರೋಜಿ ಮತ್ತು ಮನೆ ನಂ.1923/ಎ ಪ್ರತಿವಾದಿ ನಂ.1 ರಿಂದ 6 ಇವರ ಹೆಸರಿನಲ್ಲಿರುತ್ತದೆ. 1922 ರ ಮನೆಯ ಪಶ್ಚಿಮಕ್ಕೆ ನಮ್ಮ ಮನೆ 1923/ಎ ಇರುತ್ತದೆ ಎಂದರೆ ನಿಜ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿಯರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.